ಕವಿತೆ

# ಸ್ವಯಂಚಾಲಿತ ಬಾಗಿಲು



## ವಸುಂಧರಾ ಕದಲೂರು

ಕಲೆ: ದಿನೇಶ್ ಹೊಳ್ಳ


ಕಾವಲುಗಾರ ಇರದ ಕಟ್ಟಡಕ್ಕೆ
ಎಂಥಾ ಬಾಗಿಲುಗಳು! ಅವು
ಮುಚ್ಚಿದ್ದರೂ ಪ್ರವೇಶಿಕೆಯ
ನೆರಳು ಬಿದ್ದ ಕ್ಷಣವೇ ತೆರೆಯುತ್ತವೆ

ಸದಾ ಮುಚ್ಚಿಕೊಂಡೇ ಇರುವ
ದಪ್ಪ ಮೀಸೆ, ಕೈಯಲಿ ಕತ್ತಿ ಕೋವಿ
ಖಡ್ಗ ಹಿಡಿದ ಕಾವಲುಗಾರರು ನಿಗಾ
ಇಟ್ಟ ಬಾಗಿಲುಗಳು ದಿಗಿಲು ಹುಟ್ಟಿಸುತ್ತವೆ

ಅಪರಿಚಿತ ಅನಾಥಭಾವ ತರುವ
ಅನವಶ್ಯಕ ಪ್ರಶ್ನೆ ಕೂರಂಬಿನ
ನೋಟಗಳನು ಬಾಗಿಲ ಬಳಿಯೇ
ಎದುರುಗೊಳ್ಳುವುದು ಕಷ್ಟದ ಸಂಗತಿ

ಮುಚ್ಚಿದ ಬಾಗಿಲಾಚೆ ಇರುವುದು
ಕುತೂಹಲಕ್ಕಿಂತ ಭಯ ತಂದರೆ!
ಒಳಗೊಳ್ಳದೇ ಹೊರಗಿಡುವ ಭಾವ
ಅದೆಷ್ಟು ಅಸಹನೀಯ ಎಂಬುದ
ಹೇಗೆ! ಯಾರಿಗೆ? ಯಾರು ತಿಳಿಸುವವರು

ತೆರೆದುಕೊಳ್ಳಲಾರದ ಸಂಕಟ
ತೆರೆಯಲಾಗದ ಸ್ಥಿತಿ, ತೆರೆಯಬಾರದ
ಕಾರಣಗಳೊಡನೆ ಬಾಗಿಲುಗಳ ಬಳಿ
ಹೋಗಬಾರದು: ಶಾಶ್ವತ ಬೀಗ
ಜಡಿಸಿಕೊಂಡ ಬಾಗಿಲ ಕೀಲಿಕೈ
ಅಕಸ್ಮಾತ್ ಕಳೆದಿದ್ದರೆ...



Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68